ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Special Issue-3, March - April 2026, Pp. 14-19
©*IIMRD*, Mysuru

IIMRD JOURNALS
www.iimrd.com

# ಹೆಳವರ ಆರ್ಥಿಕ ಸ್ಥಿತಿಗತಿಗಳು: ಒಂದು ಅವಲೋಕನ

**ಡಾ. ಶಶಿಕುಮಾರ್ ವಿ**
ಅತಿಥಿ ಉಪನ್ಯಾಸಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**ಸಾರಾಂಶ: (Abstract)**

*ಪ್ರತಿಯೊಂದು ಸಮುದಾಯಕ್ಕೂ ಯಾವುದಾದರೂ ಒಂದು ಮೂಲ ಕಸುಬು ಇದ್ದೇ ಇರುತ್ತದೆ. ತಾವು ಮಾಡುವ ಕಸುಬುಗಳ ಹಿನ್ನೆಲೆಯಲ್ಲಿ ಆ ಸಮುದಾಯವನ್ನು ಗುರುತಿಸುತ್ತಾರೆ. ಯಾವುದೇ ಒಂದು ಸಮುದಾಯದ ಆರ್ಥಿಕ ಸ್ಥಿತಿಯ ಪರಿಗಣನೆಗೆ ಆಗುವುದು ಆತನ ವೃತ್ತಿ ಮತ್ತು ಆರ್ಥಿಕ ಮೂಲಗಳಿಂದ. ಆದರೆ ಈ ಸಮುದಾಯ ಆ ದಿನದ ಹೊಟ್ಟೆ ತುಂಬಿಸಿಕೊಳ್ಳಲು ಆ ದಿನವೇ ಸಂಪಾದಿಸಿಕೊಳ್ಳಬೇಕೆಂಬ ಮನೋಭಾವ ಹೊಂದುವ ಹೆಳವ ಸಮುದಾಯದ ಜನರ ಜೀವನ ವಿಧಾನ, ಕಸುಬುಗಳು, ಉತ್ಪಾದನೆಯ ವಿವಿಧ ಆಕಾರಗಳು, ಇವರ ಜೀವನಮಟ್ಟ, ಆರ್ಥಿಕ ಸ್ಥಿತಿಗತಿಗಳು ಮತ್ತು ಸ್ಥಾನಮಾನಗಳು ಮುಂತಾದ ಅಂಶಗಳ ಬಗ್ಗೆ ಚರ್ಚಿಸುತ್ತಾ ಪ್ರಸ್ತುತ ಈ ಲೇಖನದಲ್ಲಿ ಹೆಳವರ ಆರ್ಥಿಕ ಸ್ಥಿತಿಗತಿಗಳ ಕುರಿತು ಅಧ್ಯಯನ ಮಾಡಲಾಗಿದೆ.*

**ಮುಖ್ಯಪದಗಳು (Keywords):** *ಅಲೆಮಾರಿ ಸಮುದಾಯ, ಕುಲಕಸಬುಗಳು, ಕೃಷಿ, ಹೆಳವ, ಆರ್ಥಿಕ ಸ್ಥಿತಿಗತಿಗಳು*

**ಪೀಠಿಕೆ**

ಹೆಳವರಿಗೆ ಸ್ವಾತಂತ್ರ್ಯ ನಂತರ ಕರ್ನಾಟಕದಲ್ಲಿ 1950, 60, 70 ರ ದಶಕಗಳಲ್ಲಿ ಇವರ ವಂಶಾವಳಿ ಹೇಳುವ ಕೆಲಸ ಬಿಟ್ಟರೆ ಮತ್ಯಾವ ಕೆಲಸ ಗೊತ್ತೇ ಇರಲಿಲ್ಲ ಇವರಿಗೆ, ಉತ್ತಮ ಸ್ಥಿತಿಯಲ್ಲಿದ್ದ ಇವರ ಪಾರಂಪರಿಕ ಕಸುಬುಗಳು ನಾಗರಿಕತೆ ಬೆಳೆದಂತೆ ಇವರ ಕಸುಬಿಗೆ ಕುತ್ತುಂಟಾಗತೊಡಗಿದೆ. ಇದನ್ನೇ ನಂಬಿ ಬದುಕುತ್ತಿದ್ದ ಇವರ ಸಮುದಾಯದ ಜೀವನ ನಿರ್ವಹಣೆಗೆ ತುಂಬಾ ಕಷ್ಟವಾಗ ತೊಡಗಿತು. ಈಗಲೂ ಕೆಲವೊಂದು ಕಡೆ ಅಲೆಮಾರಿ ಜೀವನವನ್ನು ಹಾಗೆಯೇ ಮುಂದುವರಿಸಿಕೊಂಡು ಬಂದಿದ್ದಾರೆ. ಆದರೆ ಯಾವಾಗ ಜಾಗತೀಕರಣ, ಖಾಸಗೀಕರಣ ಉದಾರೀಕರಣ, ಔದ್ಯೋಗಿಕರಣ ಮುಂತಾದವುಗಳಿಂದ ಈ ಸಮುದಾಯದ ಮೇಲೆ ಕೆಟ್ಟ ಪರಿಣಾಮ ಬೀರಿ, ಇವರ ಮೂಲ ವೃತ್ತಿಗೆ ಬೆಲೆ ಇಲ್ಲದಾಗಿ, ಕ್ಷೀಣಿಸುತ್ತಾ ಬಂದು, ಆರ್ಥಿಕವಾಗಿ ಇವರ ಪರಿಸ್ಥಿತಿ ಏನೇನು ನೆಲೆ ಇಲ್ಲದ ಸಮುದಾಯವಾಗಿ ತಲೆಮಾರುಗಳಿಂದ ಎಲ್ಲಿಯೂ ತಲೆ ನಿಲ್ಲದೆ ಅಲೆಮಾರಿಗಳಾಗಿ ಆಹಾರವನ್ನು ಹುಡುಕಿಕೊಂಡು ಒಂದೂರಿನಿಂದ ಇನ್ನೊಂದು ಊರಿಗೆ ಹೋಗುತ್ತ ಬದುಕು ಸವೆಸುತ್ತಾ, ಸ್ವತಂತ್ರ ನಂತರದ ಮೊದಲ ದಿನಗಳಲ್ಲಿ ಹೆಳವ ಹೆಣ್ಣು ಮಕ್ಕಳು

*Please cite this article as:* ಶಶಿಕುಮಾರ್, ವಿ. (2026). ಹೆಳವರ ಆರ್ಥಿಕ ಸ್ಥಿತಿಗತಿಗಳು: ಒಂದು ಅವಲೋಕನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(3). ಪು.ಸಂ.* 14–19

ಸಹ ಚಾಪೆ ಹೆಣೆಯುವ ಕೆಲಸಗಳನ್ನು ಮಾಡಿ ಜೀವನ ನಿರ್ವಹಿಸುತ್ತಿದ್ದರು ಆದರೆ ನಂತರದ ದಿನಗಳಲ್ಲಿ ಅವುಗಳಿಗೆ ಮಹತ್ವವಿಲ್ಲದೆ ಇತರ ಕೂಲಿ, ಕೃಷಿ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ.

ಮುಂದುವರೆದು ತಮ್ಮ ಬದುಕಿನ ಜೀವನ ನಿರ್ವಹಣೆಗಾಗಿ ಪುರುಷರು, ಮಹಿಳೆಯರು, ರೈತಾಪಿ ಜನಗಳ ಹೊಲಗದ್ದೆಗಳಲ್ಲಿ ಕೃಷಿ ಕಾರ್ಮಿಕರಾಗಿ ಕೆಲವು ಕಡೆ ಜೀತಗಾರರಾಗಿ ಕೃಷಿ, ಪಶುಪಾಲನೆ, ಹಂದಿ ಸಾಕಾಣಿಕೆ, ರೇಷ್ಮೆ ಬೆಳೆಯನ್ನು ಬೆಳೆಯುವುದು, ಕಟ್ಟಡ ನಿರ್ಮಾಣದ ಕಾರ್ಮಿಕರಾಗಿ, ಬಾಲಕಾರ್ಮಿಕರಾಗಿ, ಕಾರ್ಖಾನೆಗಳಲ್ಲಿ ಕೆಲಸ ಮಾಡುವ ದಿನಗೂಲಿ ನೌಕರರಾಗಿ, ಜೊತೆಗೆ ಸಣ್ಣಪುಟ್ಟ ವ್ಯಾಪಾರ ಮಾಡಲು ಆರ್ಥಿಕ ಜೀವನ ನಿರ್ವಹಣೆಗೆ ಮುಂದಾಗಿದ್ದಾರೆ.

ಆದರೆ ಈ ವ್ಯಾಪಾರಕ್ಕೂ ಅವಶ್ಯಕ ಆರ್ಥಿಕ ಬೆಂಬಲ ಇವರಿಗೆ ದೊರಕುತ್ತಿಲ್ಲ. ಇವರು ಮೊದಲೆಲ್ಲ ಅಲೆಮಾರಿಗಳಾಗಿರುವುದರಿಂದ ಇವರ ಕೆಳಮಟ್ಟದ ಆರ್ಥಿಕ ಸ್ಥಿತಿಗತಿಗಳನ್ನು ನೋಡಿ ಬ್ಯಾಂಕುಗಳು, ಸಂಘ ಸಂಸ್ಥೆಗಳು ಸಹ ಇವರಿಗೆ ಸಾಲವನ್ನು ನೀಡಲು ನಿರಾಕರಿಸುತ್ತಿದ್ದವು ಆದರೆ ಕಾಲ ಕ್ರಮೇಣ ಮುಂದುವರಿದಂತೆ ಕೆಲವು ಕುಟುಂಬಗಳು ತುಂಡು ಭೂಮಿಗಳನ್ನು ಹೊಂದಿ ಕೃಷಿ ಕೆಲಸವನ್ನು ಮಾಡುತ್ತಿದ್ದಾರೆ. ಹಾಗೆಯೇ ಸರ್ಕಾರದ ನೆರವಿನಿಂದ ಬ್ಯಾಂಕುಗಳಿಂದ ಸಣ್ಣ ಪ್ರಮಾಣದ ಸಾಲವನ್ನು ಪಡೆದು ಕುರಿ, ಹಸು, ಕೋಳಿ, ಪಶುಗಳ ಸಾಗಾಣಿಕೆಯಿಂದ ಕೆಲವೊಂದು ಕುಟುಂಬಗಳು ತಮ್ಮ ಜೀವನವನ್ನು ನಿರ್ವಹಿಸುತ್ತಿವೆ.

ಇನ್ನು ಕೆಲವು ಹೆಳವ ಮಂದಿ ಹಳ್ಳಿಗಳಲ್ಲಿ ತಮ್ಮ ಹೊಟ್ಟೆ ತುಂಬಿಸಿಕೊಳ್ಳಲು ಸಾಧ್ಯವಾಗದೆ ನಗರಗಳ ಕಡೆ ಮುಖ ಮಾಡಿ ವಿವಿಧ ವೃತ್ತಿಗಳನ್ನು ಬಯಸಿ ವಲಸೆ ಹೊರಟು ಬರುತ್ತಿದ್ದಾರೆ. ಸಾಮಾನ್ಯವಾಗಿ ಕುಲಕಸುಬು ಅಂದರೆ ಸಂಪ್ರದಾಯಿಕವಾಗಿ ಕುಲಕಸುಬುಗಳನ್ನು ಈಗಲೂ ಕೆಲವೊಂದು ಕಡೆ ಮಾತ್ರ ಮಾಡುವವರಿದ್ದಾರೆ. ಅದರಿಂದಲೂ ಸಹ ಜೀವನವನ್ನು ಮಾಡುತ್ತಿದ್ದು ಆದರೆ ಮೂಲ ಕಸುಬುಗಳು ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತಿದ್ದು, ವಿದ್ಯಾಭ್ಯಾಸದ ಕಡೆ ಆಕರ್ಷಿತರಾಗಿದ್ದು ಅಲ್ಪ ಪ್ರಮಾಣದಲ್ಲಿ ಸರ್ಕಾರಿ ಕೆಲಸ ಖಾಸಗಿ ಕಂಪನಿಗಳಲ್ಲಿ ದುಡಿಯುವವರು ಇದ್ದಾರೆ.

ಮೊದಲೆಲ್ಲ ಹೊಟ್ಟೆ ಪಾಡಿಗೆಗಾಗಿ ಬಿಕ್ಷಾಟನೆಯನ್ನು ಮಾಡಿ ಜೀವನ ನಿರ್ವಹಿಸುತ್ತಿದ್ದು, ಹೆಚ್ಚು ಕಡಿಮೆ ಇವರ ಸಮುದಾಯವು ಆರ್ಥಿಕವಾಗಿ ಹೇಳತೀರದಷ್ಟು ಬಡವರು ಇದ್ದಾರೆ. ಜೊತೆಗೆ ಇವರಲ್ಲಿ ಕೆಲಸವೊಂದು ಕಡೆ ಜೀತ ಪದ್ಧತಿ ಅಸ್ತಿತ್ವದಲ್ಲಿದ್ದವು.

ಆದರೆ ಕಾಲಕ್ರಮೇಣ ಅವು ನಿಧಾನವಾಗಿ ನಿರ್ಮೂಲನೆಯಾಗಿದೆ. ಇವರು ವಾಸಿಸುವ ಸ್ಥಳ ಹೆಚ್ಚಾಗಿ ಗುಡಿಸಲುಗಳಿಂದ ಕೂಡಿದ್ದವು. ಬಹು ಸಂಖ್ಯಾತರಿಗೆ ಮನೆಗಳಿರಲಿಲ್ಲ, ಇನ್ನು ಕೆಲವೊಂದು ಕಡೆ ಡೇರೆಗಳಿಂದ ಹೊರಬಂದಿಲ್ಲ ಗುಡಿಸಲುಗಳ ವಾಸ ಸರ್ವೇಸಾಮಾನ್ಯವಾಗಿದ್ದವು.[1]

ಮಳೆ ಬಂದರೆ ಅವರ ಗುಡಿಸಲು ಕಿತ್ತುಕೊಂಡು ಹೋಗುವ ಪರಿಸ್ಥಿತಿಗಳಿದ್ದವು. ಇವರ ಬದುಕು ಮುಂದೇನು ಎಂಬ ಪ್ರಶ್ನೆಗಳು ಸದಾ ಇವರನ್ನ ಕಾಡುತ್ತಿರುತ್ತಿತ್ತು. ಈ ಸಮುದಾಯವು ಎರಡು ದಿನ ಊಟಕ್ಕೂ ಗತಿಯಿಲ್ಲದೆ ಗಂಜಿಗಾಗಿ ದಿಕ್ಕಿಲ್ಲದೆ ಪರದಾಡುವ ಪರಿಸ್ಥಿತಿಯು ಸಹ ಇತ್ತು, ದುಡಿಮೆ ಇಲ್ಲದೆ ಇವರ ಜೀವನ ಸಾಗುವುದು ತುಂಬಾ ಕಷ್ಟ ಸಾಧ್ಯವಾಗಿದೆ. ಇನ್ನು ಬಡತನದ ಬವಣೆಯಲ್ಲಿ ಬಳಲುತ್ತಿದ್ದು,

ಇವರ ಜೀವನ ನಿರ್ವಹಣೆ ಮಾಡುವುದು ಕಷ್ಟವಾಗಿದೆ. ಆದ್ದರಿಂದ ಈ ಜನಾಂಗ ಆರ್ಥಿಕವಾಗಿ ಮುಂದುವರೆಯಲು ಸಾಧ್ಯವಾಗುತ್ತಿಲ್ಲ.

ಸಾಮಾನ್ಯವಾಗಿ ಹೆಳವರ ಶೈಕ್ಷಣಿಕ ಸ್ಥಿತಿಯೇ ಶೋಚನೀಯವಾಗಿರುವಾಗ, ಇವರ ಆರ್ಥಿಕ ಸ್ಥಿತಿ ಕೇಳಬೇಕೆ ಅದು ತುಂಬಾ ದಾರುಣವಾಗಿದೆ. ಪ್ರತ್ಯೇಕ ಕಾಲೋನಿಗಳಲ್ಲಿ ವಾಸವಿದ್ದು, ನಿತ್ಯದ ಊಟಕ್ಕೆ ನಿತ್ಯದ ದುಡಿಮೆಯೇ ಗತಿಯಾಗಿದೆ. ಎಲ್ಲೋ ಕೆಲವೊಬ್ಬರು ಮಾತ್ರ ಪಾರಂಪರಗತವಾಗಿ ಬಂದಿರುವ ವೃತ್ತಿ ನಾವು ಇನ್ನೂ ಮಾಡುತ್ತಿದ್ದು ಇನ್ನು ಕೆಲವೊಂದು ಕಡೆ ಇವರು ಅಲೆಮಾರಿ ಸಂಚಾರಿಗಳಾಗಿಯೇ ಉಳಿದು ತಮ್ಮ ಆರ್ಥಿಕ ಜೀವನವನ್ನು ನಡೆಸಲು ಕೆಲವೊಂದು ಊರುಗಳಲ್ಲಿ ಭಿಕ್ಷೆ ಬೇಡುವುದನ್ನು ಕಾಣಬಹುದಾಗಿದೆ.[2]

ಗ್ರಾಮೀಣ ಭಾಗದಲ್ಲಿ ವಾಸವಿರುವ ಈ ಜನರ ತಲಾದಾಯ ತೀರಾ ಕಡಿಮೆ ಇದೆ. ಇನ್ನು ಕೆಲವೊಂದು ಕಡೆ ಇವರು ಕೂಲಿ ಮಾಡುವ ಶ್ರಮಜೀವಿಗಳಾಗಿದ್ದು, ಒಪ್ಪತ್ತಿನ ಅಂಬಲಿಗು ಕೈಗೆಟುಕದ ಸ್ಥಿತಿಯಲ್ಲಿ ಇದ್ದಾರೆ. ಮೇಲೆ ಹೇಳಿರುವಂತೆ ಎಲ್ಲೋ ನಾಲ್ಕೈದು ಕುಟುಂಬಗಳು ಮಾತ್ರ ಸ್ವಂತ ಜಮೀನನ್ನು ಹೊಂದಿದ್ದು, ಉಳಿದ ಎಲ್ಲರಿಗೂ ಕೂಲಿಯೇ ಗತಿಯಾಗಿದೆ. ಇವರ ಆದಾಯ ಮತ್ತು ಉಳಿತಾಯ ಅತ್ಯಂತ ಕಡಿಮೆ ಇದೆ. ಆರ್ಥಿಕವಾಗಿ ನೆಲೆ ಇಲ್ಲದೆ ಹಲವಾರು ವರ್ಷಗಳಿಂದ ಇಂದಿಗೂ ಸಹ ಅಲ್ಲಲ್ಲಿ ಅಲೆಮಾರಿಗಳಾಗಿ ಬದುಕು ಸವೆಸುತ್ತಿದ್ದಾರೆ.

ಆದರೂ ಇವರ ಆರ್ಥಿಕ ಮಟ್ಟವನ್ನು ಹೆಚ್ಚಿಸಿ ಇವರನ್ನು ಸಮಾಜದ ಮುಖ್ಯ ವಾಹಿನಿಗೆ ತರುವ ಪ್ರಯತ್ನ ಮಾಡಬೇಕಿದೆ. ಕೃಷಿ ಭೂ ಒಡೆತನದ ವಿಚಾರಕ್ಕೆ ಬಂದರೆ ಎಲ್ಲೋ ಅಲ್ಪ ಸ್ವಲ್ಪ ಕೃಷಿ ಭೂಮಿ ಇರುವುದರಿಂದ ಇವರು ಹೆಚ್ಚಾಗಿ ವ್ಯವಸಾಯದಲ್ಲಿ ನಿರತರಾಗಿದ್ದಾರೆ.

ಇವರಿಗೆ ಸರಿಯಾದ ಭೂ ಒಡೆತನದ ಹಕ್ಕು ಸಹ ಸಿಕ್ಕಿರುವುದಿಲ್ಲ, ಎಲ್ಲೋ ಕೆಲವೊಬ್ಬರಿಗೆ ತುಂಡು ಭೂಮಿಗಳು ಬಿಟ್ಟರೆ ಇನ್ನಾವುದೇ ಸ್ವಂತ ಜಮೀನು ಸಹ ಇವರಿಗೆ ಇರುವುದಿಲ್ಲ.

ಮೊದಲೆಲ್ಲ ಹೆಳವ ಸಮುದಾಯದವರು ಸದಾ ಅಲೆಮಾರಿ ಜೀವನವನ್ನು ಸಾಗಿಸುತ್ತಿದ್ದ ಕಾರಣ ಇವರಲ್ಲಿ ಭೂಮಿ ಸರಿಯಾಗಿ ಹಂಚಿಕೆ ಆಗಿರುವುದಿಲ್ಲ. ಸರ್ಕಾರದಿಂದ ಸಿಗಬೇಕಿದ್ದ ದರ್ಖಾಸು ಭೂಮಿ, ಭೂ ಸುಧಾರಣೆ, ಅಕ್ರಮ ಸಕ್ರಮ ಕೂಡ ಇವರಿಗೆ ಸಿಕ್ಕಿರುವುದು ತೀರ ಕಡಿಮೆಯಾಗಿದೆ. ನಂತರದ ದಿನಗಳಲ್ಲಿ ಎಲ್ಲೋ ಕೆಲವೊಂದು ಕುಟುಂಬಗಳಿಗೆ ಮಾತ್ರ ಕೃಷಿ ಭೂಮಿ ಮತ್ತು ಅಲ್ಲಲ್ಲಿ ಸರ್ಕಾರದಿಂದ ನಿವೇಶನಗಳನ್ನ ನೀಡಿರುವುದು ತೀರ ವಿರಳವಾಗಿದೆ.[3]

ಹೀಗೆ ಹೆಳವರು ಚರಿತ್ರೆಯ ವಿವಿಧ ಕಾಲಘಟ್ಟಗಳಲ್ಲಿ ಪ್ರಬಲ ಆಳುವ ವರ್ಗಗಳನ್ನು ಅವಲಂಬಿಸಿದ್ದ ಸೇವಕ ಸಮುದಾಯವಾಗಿಯೇ ರೂಪುಗೊಂಡಿರುವುದನ್ನು ನಾವು ಕಾಣಬಹುದಾಗಿದೆ.

ಇವರಲ್ಲಿ ಸಾಮಾನ್ಯವಾಗಿ ಜಮೀನಿನ ವಿವರಗಳನ್ನು ನೋಡುವುದಾದರೆ ಎಲ್ಲೋ ಕೆಲವೊಂದು ಕಡೆ ಮಾತ್ರ ಇವರಲ್ಲಿ ಒಣ ಭೂಮಿ, ನೀರಾವರಿ ಭೂಮಿ, ತೋಟ ಮಾಡುತ್ತಿರುವವರು ಮತ್ತು ಯಾವುದೆ ಜಮೀನು ಅಥವಾ ಭೂಮಿ ಇಲ್ಲದಿರುವವರು ಸಹ ಕಂಡು ಬರುವುದರಿಂದ ಹೆಳವರಲ್ಲಿ ಆರ್ಥಿಕವಾಗಿ ಪ್ರಬಲರಾಗಿಲ್ಲದಿರುವುದು ಕಂಡುಬರುತ್ತದೆ.

ಚರಿತ್ರೆಯ ಪುಟಗಳನ್ನ ತಿರುವಿ ಹಾಕಿದಾಗ ಹೆಳವರು ಮೂಲತಃ ಅಲೆಮಾರಿ, ಅರೆ ಅಲೆಮಾರಿ ಸಮುದಾಯವಾಗಿರುವುದರಿಂದ ಆರ್ಥಿಕವಾಗಿ ಅಷ್ಟೇನೂ ಸಬಲತೆಯನ್ನು ಹೊಂದಿಲ್ಲ. ಆರ್ಥಿಕವಾಗಿ ಸ್ವಲ್ಪಮಟ್ಟಿಗೆ ಉತ್ತಮವಾಗಿರುವವರ ಸಂಖ್ಯೆ ಬಹಳ ಕಡಿಮೆ ಇದೆ. ಎಲ್ಲೋ ಅಲ್ಲೊಬ್ಬ ಇಲ್ಲೊಬ್ಬರು ಶೈಕ್ಷಣಿಕ ಸ್ಥಾನಮಾನ ಉತ್ತಮವಾಗಿರುವವರು ಮಾತ್ರ ಆರ್ಥಿಕವಾಗಿ ಪ್ರಬಲರಾಗಿದ್ದಾರೆ.

ಇಂದು ಒಕ್ಕಲು ಮನೆಗಳಲ್ಲಿ ಇವರ ವಂಶಾವಳಿ ಹೇಳುವ ಮತ್ತು ಕೇಳುವ ಕುತೂಹಲ ಇಲ್ಲವಾಗಿ ಆರ್ಥಿಕ ದುಸ್ಥಿತಿಗೆ ಸಿಲುಕಿದ್ದಾರೆ. ಇವರ ಕುಟುಂಬಗಳಲ್ಲಿ ಎಲ್ಲರೂ ದುಡಿಯುವ ಸ್ಥಿತಿಯಲ್ಲಿರುವುದಿಲ್ಲ. ದುಡಿಯುವವರಿಗಿಂತ ಅವಲಂಬಿತರೆ ಹೆಚ್ಚಾಗಿ ಕಂಡು ಬರುತ್ತಾರೆ. ಇದರಿಂದಾಗಿ ಇವರು ತಮ್ಮ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಬಹಳ ಕಷ್ಟ ಪಡುತ್ತಾರೆ. ಕೆಲವೊಂದು ಕುಟುಂಬಗಳಲ್ಲಿ 14 ವರ್ಷದೊಳಗಿನ ಮಕ್ಕಳು ಸಹ ಬಾಲಕಾರ್ಮಿಕರಾಗಿ ದುಡಿಮೆಗಳಲ್ಲಿ ತೊಡಗಿರುವುದು ಕಂಡುಬರುತ್ತದೆ.

ಉದಾಹರಣೆಗೆ ಕೂಲಿ ಕೆಲಸಗಳಲ್ಲಿ, ಗ್ಯಾರೇಜ್ ಕೆಲಸಗಳಲ್ಲಿ, ಹೋಟೆಲ್, ಕಾರ್ಖಾನೆಗಳಲ್ಲಿ ಮನೆ ಕೆಲಸಗಳಲ್ಲಿ ಹೆಚ್ಚಾಗಿ ಇವರ ಮಕ್ಕಳು ಬಾಲಕಾರ್ಮಿಕರಾಗಿ ದುಡಿಮೆಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಇದರಿಂದಾಗಿ ಅವರ ಶೈಕ್ಷಣಿಕ ಜೀವನವು ಸಹ ನಾಶವಾಗುತ್ತಿದೆ. ಇದಕ್ಕೆ ಕಾರಣ ಅವರ ಬಡತನದಿಂದಾಗಿ ಇವರ ಕುಟುಂಬಗಳ ಆರ್ಥಿಕ ಜೀವನ ಸದೃಢತೆಯಿಂದ ಕೂಡಿರದೆ ಬಹುತೇಕರು ಕಡಿಮೆ ಆದಾಯವನ್ನು ಹೊಂದಿದ್ದು, ಕೆಲವೊಂದು ಸಾರಿ ತಮ್ಮ ಮೂಲಭೂತ ಅವಶ್ಯಕತೆಗಳಿಗಾಗಿ ಬೆಲೆ ಬಾಳುವ ವಸ್ತುಗಳನ್ನು ಖರೀದಿಸಲು, ಸಾಲ ತೀರಿಸಲು, ಅನಾರೋಗ್ಯಕ್ಕೆ ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ವಿವಾಹಗಳಿಗಾಗಿ ಮನೆ ಕಟ್ಟಲು ಮುಂತಾದ ಕಾರಣಗಳಿಂದಾಗಿ, ಸಾಲದ ಸುಳಿಗಳಿಗೆ ಸಿಲುಕಿ, ಆರ್ಥಿಕವಾಗಿ ದುರ್ಬಲರಾಗುತ್ತಿದ್ದಾರೆ. ಹೆಳವ ಹೆಂಗಸರು ಸಹ ಗಂಡು ಮಕ್ಕಳಂತೆ ವ್ಯವಸಾಯ ಮತ್ತು ಪಶುಸಂಗೋಪನೆಗಳಲ್ಲಿ ಭಾಗವಹಿಸುತ್ತಿದ್ದಾರೆ.[4]

ಇನ್ನು ಇವರ ಕುಟುಂಬದ ಆದಾಯದ ವಿಚಾರಕ್ಕೆ ಬಂದರೆ ತೀರ ಕೆಳಮಟ್ಟದ ಆದಾಯವನ್ನು ಹೊಂದಿದ್ದಾರೆ. ಇವರ ಉಳಿತಾಯಕ್ಕೆ ಸಂಬಂಧಿಸಿದಂತೆ ಅರ್ಧಕ್ಕಿಂತ ಹೆಚ್ಚು ಹೆಳವರು ಉಳಿತಾಯದಲ್ಲಿ ತೊಡಗಿಲ್ಲ. ಇದಕ್ಕೆ ಕಾರಣ ಅವರ ಆರ್ಥಿಕ ಸ್ಥಿತಿ ಎಲ್ಲೋ ಅಲೋಬ್ಬ ಇಲ್ಲೊಬ್ಬರು ಬ್ಯಾಂಕುಗಳಲ್ಲಿ, ಅಂಚೆ ಕಚೇರಿ, ಸಣ್ಣ ಉಳಿತಾಯ, ಜೀವವಿಮೆ, ಭವಿಷ್ಯ ನಿಧಿ, ಚೀಟಿಗಳು, ಸ್ವಸಹಾಯ ಸಂಘಗಳಲ್ಲಿ ಸ್ವಲ್ಪ ಆದಾಯದ ಭಾಗಗಳನ್ನು ಉಳಿತಾಯ ಮಾಡಿಕೊಂಡು ಬಂದಿದ್ದಾರೆ. ಆದ್ದರಿಂದ ಇವರ ಬಗ್ಗೆ ಸರ್ಕಾರ ಅಥವಾ ಸಂಘ ಸಂಸ್ಥೆಗಳ ಇಲಾಖೆಗಳು ಕ್ರಮ ಕೈಗೊಂಡರೆ ಇವರ ಆರ್ಥಿಕ ಪರಿಸ್ಥಿತಿಯನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಉತ್ತಮಗೊಳಿಸಬಹುದಾಗಿದೆ.

ಹೆಳವರು ವಿವಿಧ ಕೆಲಸಗಳಲ್ಲಿ ತೊಡಗಿರುವವರ ಪ್ರಮಾಣವನ್ನು ಗಮನಿಸಿದಾಗ, ಇನ್ನೂ ತಮ್ಮ ಮೂಲ ಕುಲ ಕಸುಬಾದ ವಂಶಾವಳಿ ಹೇಳುವ ವೃತ್ತಿ ತೀರ ಕಡಿಮೆ ಇದ್ದು ಈ ವೃತ್ತಿಯ ಅವನತಿಯ ಹಾದಿಯತ್ತ ಸಾಗುತ್ತಿರುವುದರಿಂದ ಇವರ ಜೀವನದ ನಿರ್ವಹಣೆಗಾಗಿ ಅಲ್ಲಲ್ಲಿ ಕೃಷಿಕರಾಗಿ, ಕೂಲಿಕಾರ್ಮಿಕರಾಗಿ ವ್ಯಾಪಾರಸ್ಥರಾಗಿ, ಇತರೆ ಉದ್ಯೋಗಗಳನ್ನು ಮಾಡುತ್ತಿರುವುದನ್ನು ಕಂಡುಬರುತ್ತದೆ.

**ಉಪಸಂಹಾರ**

ಹೀಗೆ ಇನ್ನೂ ಉತ್ತರ ಕರ್ನಾಟಕದ ಮತ್ತು ದಕ್ಷಿಣ ಕರ್ನಾಟಕದ ಕೆಲವೊಂದು ಕಡೆಗಳಲ್ಲಿ ಗುಡ್ಡಗಾಡುಗಳಲ್ಲಿ, ಹಳ್ಳಿಗಳ ಗುಡಿಸಲುಗಳಲ್ಲಿ ವಾಸ ಮಾಡುತ್ತಾ, ನೆಲೆ ಕಾಣದೆ ಶಿಕ್ಷಣವಿಲ್ಲದೇ, ಉದ್ಯೋಗವಿಲ್ಲದೇ, ಉಳಲು ಭೂಮಿ ಇಲ್ಲದೇ ಇವರ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸುವುದು ಹೇಗೆ ಎಂಬ ಯೋಚನೆ ನಮ್ಮೆಲ್ಲರಲ್ಲೂ ಮೂಡುತ್ತದೆ ಹಾಗೂ ಇವರಿಗೆ ಇರುವ ಅಷ್ಟೋ ಇಷ್ಟೋ ಜಮೀನಿನಲ್ಲಿ ಕೃಷಿ ಮಾಡೋಣ ಎಂದರೆ ಆರ್ಥಿಕ ಪರಿಸ್ಥಿತಿಗಳು ತೀರ ಹದಗಟ್ಟಿವೆ. ಅದರಲ್ಲೂ ಆಳುವ ವರ್ಗಗಳ ಆರ್ಥಿಕ ಚಟುವಟಿಕೆಗಳನ್ನು ಆಶ್ರಯಿಸಿಯೇ ಬದುಕುವ ಅವಲಂಬಿತ ಸಮುದಾಯವಾಗಿದ್ದು ಒಟ್ಟಾರೆ ಹೆಳವರ ಆರ್ಥಿಕ ಪರಿಸ್ಥಿತಿಗಳನ್ನು ಗಮನಿಸಿದಾಗ ಇಂದು ಇವರ ಉಪ ಮತ್ತು ಕುಲಕಸುಬುಗಳು ಪ್ರತ್ಯೇಕವಾಗಿ ಉಳಿದಿಲ್ಲವಾಗಿವೆ. ಹೀಗೆ ನಾವು ಯಾವುದೇ ಒಂದು ಸಮುದಾಯದ ಸಂಶೋಧನೆಯನ್ನು ಕೈಗೊಳ್ಳುವಾಗ ಆ ಜನಾಂಗದ ಆರ್ಥಿಕ ಸ್ಥಿತಿಗತಿಗಳನ್ನ ಅಧ್ಯಯನ ಮಾಡಿ ಅವು ಉತ್ತಮವಾಗಿದ್ದರೆ ಇವರು ಅಭಿವೃದ್ಧಿಯ ಪಥದಲ್ಲಿ ಇದ್ದಾರೆ ಎಂದು ನಮಗೆ ಗೊತ್ತಾಗುತ್ತದೆ. ಒಂದು ವೇಳೆ ಅವರು ಆರ್ಥಿಕವಾಗಿ ಉತ್ತಮವಾಗಿಲ್ಲ ಎಂದಾದರೆ ಅವರು ಹಿಂದುಳಿದಿದ್ದಾರೆ ಎಂದು ನಮಗೆ ಗೋಚರಿಸುತ್ತದೆ.

ಇತ್ತೀಚಿನ ದಿನಗಳಲ್ಲಿ ತಮ್ಮ ತಮ್ಮ ಒಕ್ಕಲು ಮನೆಗಳಿಗೆ ಹೋಗಿ ಅವರು ನೀಡುತ್ತಿದ್ದ ವಸ್ತುಗಳನ್ನು, ದವಸ ಧಾನ್ಯಗಳನ್ನ, ಧನಕರುಗಳನ್ನ, ಧಾನ ರೂಪದಲ್ಲಿ ಪಡೆಯುತ್ತಿದ್ದದ್ದು ಕಡಿಮೆಯಾಗ ತೊಡಗಿದೆ. ಒಟ್ಟಾರೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಪಡೆದು 75 ವರ್ಷಗಳಾಗುತ್ತಿದ್ದರು ಇವರು ಕೆಲವೊಂದು ಕಡೆ ಇನ್ನು ಭಿಕ್ಷಾಟನೆ ಮಾಡುವುದು ತಪ್ಪಿಲ್ಲ, ಮತ್ತು ಇವರ ಮಕ್ಕಳ ಭವಿಷ್ಯದ ಬಗ್ಗೆ ಚಿಂತನೆ ಮಾಡುವವರ್ಯಾರು, ಎಂಬ ಚಿಂತೆ ಇವರನ್ನು ಕಾಡತೊಡಗಿದೆ. ಇನ್ನೂ ಇವರು ಕೆಲವೊಂದು ಕಡೆ ಅಜ್ಞಾನ, ಅನಾಗರಿಕತೆಯಿಂದ ಬಳಲುತ್ತಿದ್ದಾರೆ. ಇದರಿಂದಾಗಿ ಕೆಲವೊಂದು ಕೆಳಜಾತಿ ಸಮುದಾಯಗಳಿಗೆ ಆರ್ಥಿಕ ಸ್ವಾತಂತ್ರ್ಯ ಇಲ್ಲದ ಕಾರಣಕ್ಕಾಗಿ ಸಾಮಾಜಿಕವಾಗಿ ಇವರು ಇನ್ನು ಕನಿಷ್ಠ ಸ್ಥಾನಮಾನಗಳನ್ನು ಹೊಂದಿಲ್ಲದಿರುವುದು ಅತ್ಯಂತ ನಾಚಿಕೆಗೇಡಿನ ವಿಷಯವಾಗಿದೆ. ಆದ್ದರಿಂದ ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರಗಳಾಗಲಿ ಇವರ ಆರ್ಥಿಕ ಪರಿಸ್ಥಿತಿಗಳನ್ನ ಅಧ್ಯಯನ ಮಾಡಿ ಇವರ ಕಡೆ ಗಮನ ಹರಿಸಿ ಇವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬೇಕಾಗಿದೆ.

**ಕೊನೆಟಿಪ್ಪಣಿಗಳು.**

1. ಹೆಳವರ್, ಎಂ.ಎಸ್. (2009). *ಹೆಳವರು.* ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ. ಪುಟ ಸಂಖ್ಯೆ–39.
2. ಹರಿಲಾಲ್, ಕೆ. ಪವಾರ್. (1993). *ಹೆಳವರ ಸಂಸ್ಕೃತಿ.* ಉಪಸಂಸ್ಕೃತಿ ಅಧ್ಯಯನ ಮಾಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ. ಪುಟ ಸಂಖ್ಯೆ–56.
3. ಪ್ರಭಾಕರ್, ಎ.ಎಸ್. (2010). *ಹೆಳವರು* ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳ ಅಧ್ಯಯನ ವರದಿ 5, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ. ಪುಟ ಸಂಖ್ಯೆ–54.

4. ಪ್ರಶಾಂತ್, ಎಚ್.ಡಿ. (2000). *ಕರ್ನಾಟಕ ರಾಜ್ಯ ಕೋಶ: 4.* ಜನಸಮುದಾಯ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಪುಟ ಸಂಖ್ಯೆ–130.

**ಪರಾಮರ್ಶನ ಗ್ರಂಥಗಳು.**


- ಬೋರಲಿಂಗಯ್ಯ, ಹೀ.ಚಿ. (1996). *ಕರ್ನಾಟಕ ಜನಪದ ಕಲೆಗಳ ಕೋಶ.* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.
- ಚನ್ನಬಸಪ್ಪ, ಗೊ.ರು. (1980). *ಕರ್ನಾಟಕದ ಜನಪದ ಕಲೆಗಳು.* ಕನ್ನಡ ಸಾಹಿತ್ಯ ಪರಿಷತ್ತು.
- ಮರಿಗೆಪ್ಪ, ಎ., ಆರ್ವಿಯಸ್ ಸುಂದರಂ., ಸ.ಚಿ. ರಮೇಶ್. (2011). *ದಕ್ಷಿಣ ಭಾರತೀಯ ಜಾನಪದ ಕೋಶ ಸಂಪುಟ–2.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.
- ಮುತ್ತಯ್ಯ, ಎಸ್.ಎಂ. (2008). ಕನ್ನಡ ಜನಪದ ಮಹಾಕಾವ್ಯಗಳು ಮತ್ತು ಪ್ರತಿ ಸಂಸ್ಕೃತಿ, ಸಂಶೋಧನಾ ಮಾಲಿಕೆ, ಕನ್ನಡ ಸಾಹಿತ್ಯ ಪರಿಷತ್ತು.
- ನಿಂಗಣ್ಣ, ಚೀ.ಸಿ. (2008). *ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ.* ಸಿದ್ದಲಿಂಗೇಶ್ವರ ಪ್ರಕಾಶನ.
- ಪ್ರಶಾಂತ್, ಎಚ್.ಡಿ. (2000). *ಕರ್ನಾಟಕ ರಾಜ್ಯ ಕೋಶ: 4.* ಜನ ಸಮುದಾಯ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಪೋತೆ, ಎಚ್.ಟಿ. (2007). ಸಂಸ್ಕೃತಿ ಸಂಕ್ರಮಣ. ಕುಟುಂಬ ಪ್ರಕಾಶನ.
- ರಾಜಶೇಖರ್, ಪಿ.ಕೆ. (2003). *ಜಾನಪದ ಸಂಭ್ರಮ ಆಕರ ಗ್ರಂಥ ಮಾಲೆ.* ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
- ಸೂರ್ಯನಾಥ್, ಯು, ಕಾಮತ್. (1984). *ಕರ್ನಾಟಕ ರಾಜ್ಯ ಗೆಜೆಟಿಯರ್ ಭಾಗ 3.* ಕರ್ನಾಟಕ ರಾಜ್ಯ ಸರ್ಕಾರ.